ಪಿಡಬ್ಲ್ಯೂಃ 3

ಇಂದು ದಿನಾಂಕಃ 29.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ ಕೆ ಬಿ ಬಿ ವಕೀಲರಿಂದಃ

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳನ್ನು ನಾನೇ ಖುದ್ದಾಗಿ ವಕೀಲರಿಗೆ ತಿಳಿಯಿಸಿ, ಬರೆಯಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲವೂ ನಿಜವಿದ್ದು, ಅದರಲ್ಲಿರುವ ಸಹಿಯು ನನ್ನದೇ ಆಗಿರುತ್ತದೆ.

ಸಾಕ್ಷಿಯು ನಿಪಿ-1 ರಲ್ಲಿ ತಮ್ಮ ದಸ್ತುರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಗುರುತಿಸಲ್ಪಟ್ಟು ನಿಪಿ-1 (ಬಿ) ಎಂದು ಗುರುತಿಸಲಾಯಿತು. ನಾನು ಸದರಿ ಸಹಿಯನ್ನು ಮೃತ್ಯು ಪತ್ರವನ್ನು ತಯಾರು ಮಾಡಿ ನನ್ನ ಸಹಿಯನ್ನು ಹಾಕಿರುತ್ತೇನೆ ಫಕ್ಕೀರಪ್ಪ ಎಂಬುವ ವ್ಯಕ್ತಿಯು ತಾನು ಮೃತ್ಯು ಪತ್ರವನ್ನು ಬರೆಯಬೇಕು ಎಂದು ನನ್ನನ್ನು ಅವರ ಮನೆಗೆ ಕರೆಸಿಕೊಂಡಿರುತ್ತಾರೆ ಅದರಂತೆ ನಾನು ನಿಪಿ-1 ಮೃತ್ಯ ಪತ್ರವನ್ನು ತಯಾರು ಮಾಡಿರುತ್ತೇನೆ. ನಾನು ಮೃತ್ಯು ಪತ್ರವನ್ನು ತಯಾರಿಸುವ ಸಂದರ್ಬದಲ್ಲಿ ಮೃತ್ಯುನ್ನು ಬರೆದು ಕೊಟ್ಟ ಫಕ್ಕೀರಪ್ಪ ಅವರ ಹೆಂಡತಿಯಾದ ಶಿದ್ಲಿಂಗಮ್ಮ , ನಾಗರಾಜ ಬಣಕಾರ , ಅರ್ಜುನಪ್ಪ ಮದ್ನೆರ ಹಾಗೂ ನಾಗರಾಜ ಬ್ಯಾಡಗಿಯವರು ಹಾಜರು ಇದ್ದು ತಮ್ಮ ತಮ್ಮ ಸಹಿಗಳನ್ನು ಹಾಕಿರತ್ತಾರೆ. ಸಾಕ್ಷಿಯು ಮೃತ್ಯು ಪತ್ರವನ್ನು ಬರೆಸಿದ ಫಕ್ಕೀರಪ್ಪ ಅವರು ತನ್ನ ಮುಂದೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಸದರಿ ಹೆಬ್ಬೆಟ್ಟಿನ ಗುರುತನ್ನು ನಾನು ಫಕ್ಕೀರಪ್ಪ ಅವರ ಸಮಕ್ಷಮದಲ್ಲಿ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ** ಪ್ರತಿವಾದಿಗಳ ಪರ ಶ್ರೀ ಯು ಬಿ ಜೆ ವಕೀಲರಿಂದಃ

ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-xx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.